# ಬರ್ತಿದೆ ಪಬ್‌ಜಿ ಇಂಡಿಯಾ!




**ನಿಷೇಧಕ್ಕೊಳಗಾಗಿದ್ದ ಪಬ್‌ಜಿ ಗೇಮ್ ಹೊಸ ರೂಪದಲ್ಲಿ ಭಾರತೀಯ ಗೇಮ್‌ಪ್ರಿಯರ ಮುಂದೆ ಬರಲು ಸಿದ್ಧತೆ ನಡೆಸುತ್ತಿದೆ. ಹೊಸ ಸಂಪೂರ್ಣ ಭಾರತೀಯ ಆವೃತ್ತಿ ಎನ್ನಲಾಗಿದೆ.**

■ **ಶಶಿಕುಮಾರ್ ಸಿ.**

ದೇಶದ ಭದ್ರತಾ ದೃಷ್ಟಿಯಿಂದ ನಿಷೇಧಕ್ಕೊಳಗಾಗಿರುವ ಪ್ರಸಿದ್ಧ ಗೇಮಿಂಗ್ ಆ್ಯಪ್ 'ಪಬ್ ಜಿ' ಹೊಸ ರೂಪದಲ್ಲಿ ಮತ್ತೆ ಭಾರತೀಯ ಗೇಮ್‌ಪ್ರಿಯರ ಮುಂದೆ ಬರಲು ಸಜ್ಜಾಗುತ್ತಿದೆ. ಹೌದು, 'ಪಬ್‌ಜಿ ಇಂಡಿಯಾ' ಹೆಸರಿನಿಲ್ಲಿ ಈ ಆ್ಯಪ್ ಮತ್ತೆ ಬಳಕೆಗೆ ಬರಲಿದೆ.

ಚೀನಾ ಮೂಲದ ಅಪ್ಲಿಕೇಶನ್ ಜೊತೆಗೇ ಚೀನಾದ ಸರ್ವರ್ ನಿರ್ವಹಣೆ ಹೊಂದಿದ್ದ 'ಪಬ್‌ಜಿ' ಗೇಮ್ ಆ್ಯಪ್ ಅನ್ನು ದೇಶದ ಆಂತರಿಕ ಸುರಕ್ಷತಾ ದೃಷ್ಟಿಯಿಂದ ಕೆಲವು ತಿಂಗಳುಗಳ ಹಿಂದೆ ನಿಷೇಧಿಸಲಾಗಿತ್ತು. ಆಗ ಆ ಆ್ಯಪ್‌ನ ಸರ್ವರ್ ನಿರ್ವಹಣೆ ವ್ಯವಸ್ಥೆಯೂ ಚೀನಾದಲ್ಲೇ ಇತ್ತು. ಸದ್ಯ ಹೊಸದಾಗಿ ಅಭಿವೃದ್ಧಿಗೊಳಿಸುತ್ತಿರುವ ಪಬ್‌ಜಿ ಇಂಡಿಯಾ ಗೇಮಿಂಗ್ ಆ್ಯಪ್ ಅನ್ನು ಸಂಪೂರ್ಣ ದೇಶಿಮಯಗೊಳಿಸುವ ಭರವಸೆ ಮೇರೆಗೆ ದೇಶದಲ್ಲಿ ಅನುಮತಿ ನೀಡಲಾಗುತ್ತಿದೆ ಎನ್ನಲಾಗಿದೆ.

ಪಬ್‌ಜಿ ಇಂಡಿಯಾ ಆ್ಯಪ್‌ಗೆ ಅಗತ್ಯವಿರುವ ಸರ್ವರ್ ನಿರ್ವಹಣೆ ವ್ಯವಸ್ಥೆಯನ್ನು ದೇಶದಲ್ಲೇ ಸ್ಥಾಪಿಸುವ ಹಾಗೂ ಸರ್ಕಾರದ ನಿಯಮಾವಳಿಗೆ ಪೂರಕವಾಗುವಂತೆ ಆ್ಯಪ್ ಅನ್ನು ವಿನ್ಯಾಸ ಮಾಡಿರುವುದರಿಂದ ಕಾರ್ಯನಿರ್ವಹಣೆಗೆ ಅನುಮತಿ ಸಿಕ್ಕಿದೆ. ಹೀಗಾಗಿಯೇ, 'ಹೊಸ ರೂಪದಲ್ಲಿ ಮತ್ತೆ ಭಾರತವನ್ನು ನಾವು ಪ್ರವೇಶಿಸುತ್ತಿದ್ದೇವೆ' ಎಂಬ ಸಂದೇಶವನ್ನು ಆ್ಯಪ್ ತನ್ನ ಹಿಂದಿನ ಬಳಕೆದಾರರಿಗೆ ರವಾನಿಸಿದೆ.

ಚೀನಾದ ನಿರ್ವಹಣೆಯಲ್ಲಿದ್ದ ಸರ್ವರ್‌ಗಳು ಬಳಕೆದಾರರ ಮಾಹಿತಿ ಕದಿಯುತ್ತವೆ ಮತ್ತು ದೇಶದ ಭದ್ರತೆ, ವೈಯಕ್ತಿಕ ಹಿತಾಸಕ್ತಿಗೆ ಮಾರಕ ಎಂಬ ಗಂಭೀರ ಆರೋಪದಿಂದಾಗಿ ಪಬ್‌ಜಿ ಗೇಮ್ ಅನ್ನು ನಿಷೇಧಿಸಲಾಗಿತ್ತು. ದೇಶದಲ್ಲಿ ಅತ್ಯಂತ ಹೆಚ್ಚಿನ ಬಳಕೆದಾರರನ್ನು ಹೊಂದಿದ್ದ ಪಬ್‌ಜಿ ಗೇಮ್ ಒಡೆತನದ ಕಂಪನಿಯು, ಆ್ಯಪ್ ನಿಷೇಧದಿಂದ ಹೆಚ್ಚಿನ ನಷ್ಟಕ್ಕೆ ಸಿಲುಕಿತ್ತು. ಈ ನಷ್ಟದಿಂದ ಹೊರಬರುವ ಸಲುವಾಗಿ ಆ್ಯಪ್, ಚೀನಾದ ಸರ್ವರ್ ಜತೆಗಿನ ಒಪ್ಪಂದವನ್ನು ರದ್ದುಗೊಳಿಸಿ, ಆ ಒಪ್ಪಂದವನ್ನು ಭಾರತದೊಂದಿಗೆ ಮಾಡಿಕೊಂಡಿದೆ. ಅಲ್ಲದೆ, ಪ್ರತ್ಯೇಕವಾಗಿ ಪಬ್‌ಜಿ ಮೊಬೈಲ್ ಇಂಡಿಯಾ ಎನ್ನುವ ಗೇಮ್ ಅನ್ನು ಅಭಿವೃದ್ಧಿಪಡಿಸಿದೆ. ಈ ಬಾರಿ ದೇಶದಲ್ಲೇ ಬಳಕೆದಾರರ ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ ಮಾಡುವುದಾಗಿ ಹೇಳಿದೆ.

ಪಬ್‌ಜಿ ನೂತನ ಗೇಮ್ ದೇಶದಲ್ಲೇ ಅಭಿವೃದ್ಧಿಪಡಿಸಲಾಗಿದ್ದು, ಸರ್ವರ್‌ನ ಸಂಪೂರ್ಣ ನಿರ್ವಹಣೆಯನ್ನು ದೇಶದಲ್ಲೇ ಮಾಡಲಾಗುತ್ತದೆ. ಹೊಸ ಗೇಮ್ ಬರುತ್ತಿರುವ ಕುರಿತು ಕಂಪನಿ ಸುಳಿವು ನೀಡಿದ್ದು, ಇನ್‌ಸ್ಟಾಗ್ರಾಂ ಪೋಸ್ಟ್ ಮೂಲಕ ಕಿರುಅವಧಿಯ ವಿಡಿಯೊ ಒಂದನ್ನು ಹಂಚಿಕೊಂಡಿದೆ.

ನೂತನ ಪಬ್‌ಜಿ ಇಂಡಿಯಾ ಗೇಮ್, ಸಂಪೂರ್ಣವಾಗಿ ಭಾರತೀಯ ಆವೃತ್ತಿಯಾಗಿದ್ದು, ಜಾಗತಿಕ ಆವೃತ್ತಿಗಿಂತ ಭಿನ್ನವಾಗಿರುತ್ತದೆ. ಜತೆಗೆ ಬಜೆಟ್ ಸರಣಿಯ ಸ್ಮಾರ್ಟ್‌ಫೋನ್ ಬಳಸುವ ಗ್ರಾಹಕರನ್ನು ಸೆಳೆಯುವ ಉದ್ದೇಶದಿಂದ ಕಡಿಮೆ RAM ಮತ್ತು ಪ್ರೊಸೆಸರ್ ಇರುವ ಫೋನ್‌ನಲ್ಲೂ ಸರಾಗವಾಗಿ ಕಾರ್ಯನಿರ್ವಹಿಸುವಂತೆ ಹೊಸ ಪಬ್‌ಜಿ ಗೇಮ್ ರೂಪಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಾದ ಇನ್‌ಸ್ಟಾಗ್ರಾಂ ಹಾಗೂ ಟ್ವಿಟರ್‌ನಲ್ಲಿ ಆ್ಯಪ್ ತಿಳಿಸಿದೆ. ಜೊತೆಗೆ ಪಬ್‌ಜಿ ಆ್ಯಪ್ ಅನ್ನು ತನ್ನ ಗ್ರಾಹಕರು ಹೇಗೆ ಮಿಸ್ ಮಾಡಿಕೊಳ್ಳುತ್ತಿದ್ದಾರೆ ಎಂಬ ಮಾಹಿತಿಯುಳ್ಳ ವಿಡಿಯೊವನ್ನೂ ಹಂಚಿಕೊಂಡಿದೆ. ■

## ಫೇಸ್‌ಬುಕ್‌ನಲ್ಲಿ ವ್ಯಾನಿಶ್!

ತನ್ನ ಬಳಕೆದಾರರಿಗೆ ಡಿಸ್‌ಅಪಿಯರಿಂಗ್ ಮೆಸೇಜ್ ಆಯ್ಕೆಯನ್ನು ಒದಗಿಸುವುದಾಗಿ ವಾಟ್ಸ್‌ಆ್ಯಪ್ ಈಚೆಗೆ ಹೇಳಿತ್ತು. ಈಗ ವಾಟ್ಸ್‌ಆ್ಯಪ್ ಹಾದಿಯನ್ನೇ ತುಳಿದಿರುವ ಫೇಸ್‌ಬುಕ್, ತನ್ನ ಮೆಸೆಂಜರ್ ವಿಭಾಗಕ್ಕೂ ಇದೇ ಮಾದರಿಯ ವ್ಯಾನಿಶ್ ಮೋಡ್ ಆಯ್ಕೆಯನ್ನು ಒದಗಿಸುವುದಾಗಿ ಹೇಳಿದೆ.




ವ್ಯಾನಿಶ್ ಆ್ಯಯ್ಕೆಯು ವಾಟ್ಸ್‌ಆ್ಯಪ್‌ನ ಡಿಸ್‌ಅಪಿಯರಿಂಗ್ ಮೆಸೇಜ್ ಆಯ್ಕೆಯ ಮತ್ತೊಂದು ಮಾದರಿಯಾಗಿದ್ದು, ಈ ವಿಶೇಷವಾದ ಮೋಡ್ ಅನ್ನು ಆನ್ ಮಾಡಿಟ್ಟುಕೊಂಡರೆ ಚಾಟ್ ವಿಭಾಗದಲ್ಲಿ ಯಾವುದೇ ಮೆಸೇಜ್‌ಗಳು ಸೇವ್ ಆಗುವುದನ್ನು ತಡೆಯುತ್ತದೆ. ಅಂದರೆ ನಿಮ್ಮ ಚಾಟ್‌ನ ವಿವರ ಸೇವ್ ಆಗುವುದಿಲ್ಲ. ಅದರ ಬದಲು ಸಂದೇಶಗಳನ್ನು ನೋಡಿದ ಬಳಿಕ ಅವು ತಾನಾಗಿಯೇ ಡಿಲೀಟ್ ಆಗುತ್ತವೆ. ಈ ಫೀಚರ್ ಸದ್ಯ ಅಮೆರಿಕದಲ್ಲಿ ಪ್ರಾಯೋಗಿಕ ಹಂತದಲ್ಲಿದ್ದು, ಶೀಘ್ರವೇ ಇತರ ದೇಶಗಳಿಗೂ ವಿಸ್ತಾರಗೊಳ್ಳಲಿದೆ.

ಕೆಲವೊಂದು ವಿಶೇಷ ಸಂದರ್ಭದಲ್ಲಿ ಸ್ನೇಹಿತರು, ಸಂಬಂಧಿಗಳಿಂದ ಅತಿಯಾದ ಸಂದೇಶಗಳು ರವಾನೆಯಾಗುತ್ತವೆ. ಅವುಗಳಿಂದ ಮೆಮೊರಿ ಹೆಚ್ಚಾಗುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ವ್ಯಾನಿಶ್ ಮೋಡ್ ಅನ್ನು ಆನ್ ಮಾಡಿದರೆ, ಸಂದೇಶಗಳನ್ನು ಸ್ವೀಕರಿಸಿದವರು ಅವುಗಳನ್ನು ನೋಡಿದ ಬಳಿಕ ಅವು ತಾನಾಗಿಯೇ ಡಿಲೀಟ್ ಆಗುತ್ತವೆ. ಇದರಿಂದ ಮೆಮೊರಿ ಹೆಚ್ಚಾಯಿತೆಂದು ಮೆಸೇಜ್‌ಗಳನ್ನು ಡಿಲೀಟ್ ಮಾಡುವ ಪ್ರಮೇಯ ಎದುರಾಗದು. ಜೊತೆಗೆ ನಿಮ್ಮ ಚಾಟ್ ಹಿಸ್ಟರಿಯಲ್ಲೂ ಆ ಮೆಸೇಜ್‌ಗಳು ಸ್ಟೋರ್ ಆಗುವುದಿಲ್ಲ.